**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:ಕೇಂದ್ರ ಕಛೇರಿ:ಶಾಂತಿನಗರ:ಬೆಂಗಳೂರು-27**

ಸಂ:ಬೆಂಮಸಾಸಂ:ಕೇಕ:ಸಂ:ಆ:ಸಾ-2: 8Ad 829 :2019-20 ದಿನಾಂಕ:25.06.2019

**ಕಛೇರಿ ಆದೇಶ**

**ವಿಷಯ:** 2019-20ನೇ ಸಾಲಿನಲ್ಲಿ ವಿತರಣೆ ಮಾಡಲಾದ ವಿದ್ಯಾರ್ಥಿ ಸ್ಮಾರ್ಟ್‌ಕಾರ್ಡ್‌ಗಳನ್ನು ಮಾನ್ಯ ಮಾಡುವ ಬಗ್ಗೆ.

..........

2019-20ನೇ ಸಾಲಿನ ವಿದ್ಯಾರ್ಥಿ ಪಾಸುಗಳನ್ನು ಸ್ಮಾರ್ಟ್‌ಕಾರ್ಡ್‌ಗಳ ಮಾದರಿಯಲ್ಲಿ ವಿತರಣೆ ಮಾಡಲು ಕ್ರಮಕೈಗೊಳ್ಳಲಾಗಿದ್ದು, 1 ರಿಂದ ಪಿಯುಸಿ ವರೆಗಿನ ವಿದ್ಯಾರ್ಥಿಗಳಿಗೆ 2018-19ನೇ ಸಾಲಿನ ಸ್ಮಾರ್ಟ್‌ಕಾರ್ಡ್ ಜೊತೆಗೆ 2019-20ನೇ ಸಾಲಿನ ಶಾಲಾ/ಕಾಲೇಜಿನ ಶುಲ್ಕ ಪಾವತಿ ರಶೀದಿಯೊಂದಿಗೆ ಸಂಸ್ಥೆಯ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಲು ದಿನಾಂಕ: 20.06.2019 ರವರೆಗೆ ಅವಕಾಶ ಕಲ್ಪಿಸಲಾಗಿತ್ತು.

2019-20ನೇ ಸಾಲಿನ ಸ್ಮಾರ್ಟ್‌ಕಾರ್ಡ್ ವಿದ್ಯಾರ್ಥಿ ಪಾಸುಗಳನ್ನು ಈಗಾಗಲೇ ಸಂಸ್ಥೆಯ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಮತ್ತು ಟಿ.ಟಿ.ಎಂ.ಸಿ.ಗಳಲ್ಲಿ ವಿತರಣೆ ಮಾಡಲು ಕ್ರಮಕೈಗೊಳ್ಳಲಾಗಿದೆ.

ಮುಂದುವರೆದು, ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿ, ಶಾಲಾ/ಕಾಲೇಜು/ಬೆಂ.ಮ.ಸಾ.ಸಂಸ್ಥೆಯಿಂದ ಅನುಮೋದನೆ ದೊರೆತು ಪಾಸು ಪಡೆಯಲು ಕಾಲಾವಕಾಶ ನೀಡುವಂತೆ ಶಾಲಾ/ಕಾಲೇಜುಗಳಿಂದ ಕೋರಿಕೆಗಳನ್ನು ಸ್ವೀಕರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸಂಸ್ಥೆಯು ವಿದ್ಯಾರ್ಥಿಗಳ ಹಿತವನ್ನು ಗಮನದಲ್ಲಿಟ್ಟುಕೊಂಡು **2018-19 ಸಾಲಿನ ವಿದ್ಯಾರ್ಥಿ ಪಾಸು ಹಾಗೂ 2019-20ನೇ ಸಾಲಿನ ಶಾಲಾ/ಕಾಲೇಜಿಗೆ ದಾಖಲಾಗಿರುವ ಶುಲ್ಕ ರಶೀದಿಯೊಂದಿಗೆ ದಿನಾಂಕ:30.06.2019ರವರೆಗೆ ಸಂಸ್ಥೆಯ ಸಾಮಾನ್ಯ ಸೇವೆಗಳಲ್ಲಿ (ವಾಸಸ್ಥಳದಿಂದ ಶಾಲಾ/ಕಾಲೇಜಿನವರೆಗೆ ) ಪ್ರಯಾಣಿಸಲು** ಅವಕಾಶ ಕಲ್ಪಿಸಲಾಗಿದೆ.

ಮುಖ್ಯ ಸಂಚಾರ ವ್ಯವಸ್ಥಾಪಕರು (ಆ)
ಬೆಂ.ಮ.ಸಾ.ಸಂಸ್ಥೆ

ಪ್ರತಿಯನ್ನು ಗೌರವಪೂರ್ವಕವಾಗಿ.

1. ಆಪ್ತ ಕಾರ್ಯದರ್ಶಿಯವರು, ಅಧ್ಯಕ್ಷರು, ಬೆ.ಮ.ಸಾ.ಸಂಸ್ಥೆ ರವರಿಗೆ ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲು ರವಾನಿಸಲಾಗಿದೆ.
2. ಆಪ್ತ ಕಾರ್ಯದರ್ಶಿಯವರು, ವ್ಯವಸ್ಥಾಪಕ ನಿರ್ದೇಶಕರು, ಬೆ.ಮ.ಸಾ.ಸಂಸ್ಥೆ ರವರಿಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರಲು ರವಾನಿಸಲಾಗಿದೆ.
3. ಆಪ್ತ ಕಾರ್ಯದರ್ಶಿಯವರು, ನಿರ್ದೇಶಕರು(ಭ.ಜಾ.&ಪ), ಬೆಂಮಸಾಸಂಸ್ಥೆ ರವರಿಗೆ ಮಾನ್ಯ ನಿರ್ದೇಶಕರ ಗಮನಕ್ಕೆ ತರಲು ರವಾನಿಸಲಾಗಿದೆ.
4. ಮುಖ್ಯ ಲೆಕ್ಕಾಧಿಕಾರಿ & ಆರ್ಥಿಕ ಸಲಹೆಗಾರರು, ಬೆಂಮಸಾಸಂಸ್ಥೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.
5. ಎಲ್ಲಾ ಇಲಾಖಾ ಮುಖ್ಯಸ್ಥರು, ಬೆಂಮಸಾಸಂಸ್ಥೆ ರವರಿಗೆ ಮಾಹಿತಿಗಾಗಿ ರವಾನಿಸಲಾಗಿದೆ.

Scanned by CamScanner